**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.11/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | ಕಲ್ಲನಗೌಡ ಪಾಟೀಲ | ಸಿಡಬ್ಲ್ಯೂ | 2 |
| ತಂದೆ ಹೆಸರು | ಬಸನಗೌಡ | ಪಿಡಬ್ಲ್ಯೂ | 1 |
| ವಯಸ್ಸು | 37 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಕೂರಗುಂದ | | |

**ದಿಃ 12.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.**

**1).** ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ಮತ್ತು ಕಚ್ಚಾ ನಕಾಶೆಯನ್ನು ತೋರಿಸಿದ್ದು, ಅವುಗಳಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸ್ಥಳ ಪಂಚನಾಮೆಯನ್ನು ನಿ.ಪಿ-1 ಎಂದು, ಕಚ್ಚಾ ನಕಾಶೆಯನ್ನು ನಿ.ಪಿ-2 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ-1(ಎ) ಮತ್ತು ನಿ.ಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಾಲ್ಕು ಫೋಟೋಗಳನ್ನು ತೋರಿಸಿದ್ದು, ಅದರಲ್ಲಿ ತಾನು ಇರುವದಾಗಿ ಒಪ್ಪಿಕೊಂಡಿರುತ್ತಾರೆ. ಫೋಟೋಗಳನ್ನು ನಿ.ಪಿ-3 ರಿಂದ ನಿ.ಪಿ-6 ಎಂದು ಗುರುತಿಸಲಾಯಿತು.

**2)** ಎರಡು ವರ್ಷಗಳ ಹಿಂದೆ ಗುತ್ತಲ ಪೊಲೀಸ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ಗೊತ್ತಿಲ್ಲ. ದ್ವಿಚಕ್ರ ವಾಹನ ಅಪಘಾತವಾಗಿತ್ತು ಎಂದು ಫೋಟೋಗಳನ್ನು ತೆಗೆದಿದ್ದಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದರಿಂದ, ಪರಿಶೀಲಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಭಾರ ಹಿ.ಸ.ಸ.ಅಭಿಯೋಜಕರಿಂದ.**

**2)** ದಿನಾಂಕಃ 12.07.2023 ರಂದು ಬೆಳಿಗ್ಗೆ 10-30 ರಿಂದ 11-00 ರವರೆಗೆ ನನ್ನ ಮತ್ತು ಚಾ.ಸಾ-3 ರವರ ನಿ.ಪಿ-1 ರಂತೆ ಸ್ಥಳ ಪಂಚನಾಮೆ ಮಾಡಿ, ನಿ.ಪಿ-2 ಕಚ್ಚಾ ನಕಾಶೆಯನ್ನು ತಯಾರಿಸಿ, ನಿ.ಪಿ-3 ರಿಂದ ನಿ.ಪಿ-6 ರಿಂದ ಫೋಟೋ ತೆಗೆದು ನನ್ನ ಸಹಿ ಪಡೆದಿದ್ದಾರೆ ಅಂದರೆ ಸರಿಯಲ್ಲ. ನನಗೆ

ಎಲ್ಲ ವಿಚಾರ ಗೊತ್ತಿದ್ದರೂ, ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಶ್ರೀ.ಸಿ.ಹೆಚ್.ಜಿ ವಕೀಲರಿಂದಃ ಆರೋಪಿ ಪರವಾಗಿಃ ಪಾಟೀ ಸವಾಲು ಇರುವದಿಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.